**ಸಾಕ್ಷಿಗೆ ದಿನಾಂಕ 18-09-2025 ರಂದು ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪಿರ್ಯಾದಿ ಪರ ವಕೀಲರಿಂದ**

ನಮ್ಮ ಕಂಪನಿಯ ಜಿ.ಎಸ್.ಟಿ ಹಾಗೂ ತೆರಿಗೆ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ. 2022-23 ಹಾಗೂ 2023-24 ರ ನಮ್ಮ ಕಂಪನಿಯ ಜಿ.ಎಸ್.ಟಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ. ನಮ್ಮ ಕಂಪನಿಯ ಹೆಸರಿಗೆ ಮಾರಾಟ ಮಾಡಲು ನೀಡಿದ ಪರವಾನಗಿ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ. ಆರೋಪಿಗೆ ನೀಡಿದ್ದೇನೆಂದು ಹೇಳುವ ವಸ್ತುಗಳನ್ನು ತೋರಿಸಲು ಈವರೆಗೂ ಅದಕ್ಕೆ ಸಂಬಂಧಿಸಿದ ಬಿಲ್ ಅಥವಾ ರಸೀದಿಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಆರೋಪಿಗೆ ನಾನು ವಸ್ತುಗಳನ್ನು 2023 ರ ಮಾರ್ಚ್ - ಎಪ್ರೀಲ್ ತಿಂಗಳಲ್ಲಿ ನೀಡಿರಬಹುದು. ಆರೋಪಿಗೆ ನಾನು ಜಿ.ಎಸ್.ಟಿ ಬಿಲ್ ಸಹಿತ ಮತ್ತು ಬಿಲ್ ರಹಿತ ವಸ್ತುಗಳನ್ನು ನೀಡಿರುತ್ತೇನೆ. ನನ್ನ ಮತ್ತು ಆರೋಪಿಯ ನಡುವೆ ಸಂಬಂಧ ಚೆನ್ನಾಗಿ ಇದ್ದ ಕಾರಣ ಆರೋಪಿಯ ಕೋರಿಕೆಯಂತೆ ಜಿ.ಎಸ್.ಟಿ ರಹಿತ ಬಿಲ್ ಗಳನ್ನು ನೀಡಿರುತ್ತೇನೆ. ರೂ. 5,12,780 ಗಳ ಪೈಕಿ ಜಿ.ಎಸ್.ಟಿ ಸಹಿತ ಮತ್ತು ಜಿ.ಎಸ್.ಟಿ ರಹಿತ ಬಿಲ್ ಗಳ ಮೊತ್ತ ಎಷ್ಟು ಇರುತ್ತದೆ ಎಂದು ನಿಖರವಾಗಿ ಗೊತ್ತಿರುವುದಿಲ್ಲ.

ಈ ಪ್ರಕರಣದಲ್ಲಿ ಆರೋಪಿಯಿಂದ ರೂ.87,500/- ಗಳು ಬರಬೇಕೆಂದು ನನ್ನ ದೂರು, ನೋಟೀಸು ಹಾಗೂ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ತಿಳಿಸಿರುತ್ತೇನೆ. ಆ ರೀತಿ ನಾನು ದೂರು, ನೋಟಿಸು ಹಾಗೂ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಬರೆದಿರುವುದಿಲ್ಲ ಎಂದರೆ ಸರಿಯಲ್ಲ.

ಆರೋಪಿಯ ವಿರುದ್ದ ಒಂದು ದೂರು ಹಾಗೂ ಪ್ರ.ವ.ವರದಿಯನ್ನು ಮುಂಡಗೋಡಿನಲ್ಲಿ ದಾಖಲಿಸಿರುತ್ತೇನೆ. ಸದರಿ ಪ್ರಕರಣದಲ್ಲಿ ಆರೋಪಿಯ ವಿರುದ್ದ ಬಿ ಅಂತಿಮ ವರದಿಯನ್ನು ಸಲ್ಲಿಸಿರುತ್ತಾರೆಂದರೆ ಸಾಕ್ಷಿಯು ಆರೋಪಿಯ ಜೊತೆ ಪೋಲಿಸರು ಶಾಮಿಲಾಗಿ ಸಲ್ಲಿಸಿರುತ್ತಾರೆ ಎಂದು ನುಡಿಯುತ್ತಾರೆ.

ಸಾಕ್ಷಿಯು ಮುಂದುವರೆದು ಆ ಪ್ರಕರಣದಲ್ಲಿ ಆರೋಪಿಗೆ ಪರವಾನಗಿ ಇಲ್ಲದೇ ವಸ್ತುಗಳನ್ನು ಮಾರಾಟ ಮಾಡಿದ ಅಂಗಡಿಗಳನ್ನು ಮುಟ್ಟುಗೋಲು ಹಾಕಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ವಿಷಯಗಳನ್ನು ಈ ಪ್ರಕರಣದಲ್ಲಿ ತಿಳಿಸಿರುವುದಿಲ್ಲ, ಆ ವಿಷಯಗಳನ್ನು ಹೇಳಲು ಅಗತ್ಯ ಎನಿಸಲಿಲ್ಲ ಹಾಗಾಗಿ ತಿಳಿಸಿರುವುದಿಲ್ಲ.

ಆರೋಪಿಯ ಬಳಿ 2 ಚೆಕ್ ಗಳನ್ನು ಪಡೆದುಕೊಂಡಿರುತ್ತೇನೆಂದರೆ ಸರಿ. ಸದರಿ ಚೆಕ್ ಗಳ ಸಂಖ್ಯೆ ನೆನಪಿರುವುದಿಲ್ಲ. ರೂ.10 ಲಕ್ಷ ಚೆಕ್ ಅನ್ನು ಮೊದಲು ನಗದೀಕರಣಕ್ಕೆ ನೀಡಿರುತ್ತೇನೆ. ಆರೋಪಿಯು ಕೆಲವೊಂದು ವಸ್ತುಗಳನ್ನು ಹಿಂದಿರುಗಿಸಿರುತ್ತಾರೆ ಆದರೆ ಹಿಂದಿರುಗಿಸಿದ ವಸ್ತುಗಳಲ್ಲಿ ಕೆಲವು ವಸ್ತುಗಳು ಹಾನಿಗೆ ಒಳಗಾಗಿರುತ್ತವೆ ಹಾಗೂ ಹಾನಿಗೆ ಒಳಗಾದ ವಸ್ತುಗಳ ಬೆಲೆಯನ್ನು ಹಿಂದಿರುಗಿಸುತ್ತೇನೆಂದು ಒಪ್ಪಿಕೊಂಡಿರುತ್ತಾರೆ. ಅದಕ್ಕೆ ಸಂಬಂಧಿಸಿದಂತೆ ಯಾವುದೇ ಲಿಖಿತ ದಾಖಲೆಗಳು ಇರುವುದಿಲ್ಲ.

ನನ್ನ ಬಳಿ ಯಾವುದೇ ರಸೀದಿಗಳು ಇರುವುದಿಲ್ಲ ಹಾಗೂ ಯಾವುದೇ ಲಿಖಿತ ದಾಖಲೆಗಳು ಇರುವುದಿಲ್ಲ, ನನಗೆ ಚೆಕ್ ಸಂಖ್ಯೆ ಹಾಗೂ ನಗದೀಕರಣಕ್ಕೆ ನೀಡಿದ ದಿನಾಂಕ ಹಾಗೂ ಚೆಕ್ ಹಿಂದಿರುಗಿ ಬಂದ ದಿನಾಂಕ ನೆನಪಿರುವುದಿಲ್ಲ, ಭದ್ರತೆಗೆಂದು ಪಡೆದ ಚೆಕ್ ಅನ್ನು ದುರುಪಯೋಗಪಡಿಸಿಕೊಂಡು ಈ ಸುಳ್ಳು ಪ್ರಮಾಣ ಪತ್ರವನ್ನು ದಾಖಲಿಸಿರುತ್ತೇನೆಂದರೆ ಸರಿಯಲ್ಲ. ಆರೋಪಿಯು ನನ್ನ ಬಳಿ ಯಾವುದೇ ಹಣ ಕೊಡುವುದು ಇರುವುದಿಲ್ಲ ಆದರೂ ಸಹ ಆರೋಪಿಯ ವಿರುದ್ಧ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ನನ್ನ ಉಕ್ತಲೇಖನ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸರಿ ಇದೆ**

**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,**
**ದೊಡ್ಡಬಳ್ಳಾಪುರ.**